

ಕುಡ್ದು ತಿರುಗ್ತಾರ. ಸುಮ್ನೆ ಮನ್ಯಾಗ ಬಾಗ್ಲು ಹಕ್ಕೆಂದು ಮಕ್ಕಂಬರ್ರಿ' ಅಂದ್ರೂ ಶಾಣ ಕೇಳಲಿಲ್ಲ. ಎತ್ತಿನ ಅಂಕಣದ ಮುಂದಿದ್ದ ಪಡಸಾಲ್ಯಾಗ ಮಲಗಾಕ ಮುಂದಾದ. ತಟತಟಗು ಕುದಿಕುದಿ ಅನಿಸಿದ್ರು. ಗವಾಂಚಿಯಿಂದ ತಣ್ಣನ ಗಾಳಿ ಸೋಕಿ ಬಡಿತಿತ್ತು. ಇನ್ನೇನು ಶಾಣಗ ನಿದ್ದಿ ತಗತಗತ್ತಿಗೆ ಸಟಕ್ಕನ ಕರೆಂಟು ಬಂತು. ಅಲ್ಲೇ ಇದ್ದ ಶಾಣನ ಕಣ್ಣಿಗೆ ಬೆಂಕಿ ಹಚ್ಚಿದಂಗಾಗಿ ಎದ್ದುಕೂತು ಪಡಸಾಲಿ ಸುತ್ತ ನೋಡಿದ. ದಗ್ಗಂತ ಕರೆಂಟಿನ ಬೆಳಕಿಗೆ ಅಂಕಣದಾಗಿದ್ದ ಜೋಡಿ ಎತ್ತು ಶಾಣನ ಕಣ್ಣಿಗೆ ಬೆಳ್ಳನ ತತ್ತಿ ಕಂಡಂಗಾದ್ವು. ಗ್ವಾದ್ಲ್ಯಾಗ ಹಚ್ಚನ ಹಸಿಮೇವು ಹಾಕಿದ್ರಿಂದ ಸಪ್ಪಳ ಇರಲಾರದಂಗೆ ಒಂದಕ್ಕೊಂದು ಕೋಡಾನಿಸಿಕೊಂಡು ಹುರುಪಿಲೆ ಮೆಯ್ಯಕತ್ತಿದ್ದನ್ನ ರೆಪ್ಪೆ ಬಡಿಲಾರದಂಗ ನೋಡಕತ್ತಿದ. ಎರಡು ಎತ್ತುಗಳಲ್ಲಿ ಎಳ್ಳು ಕಾಳಿನಷ್ಟು ಏನೂ ಫರಕಿರಲಿಲ್ಲ. ಎರಡೆತ್ತು ಅವಳಿ ಜವಳಿ ಇದ್ದಂಗಿದ್ವು. ಈ ಎತ್ತುಗಳನ್ನು ನೋಡಿ ಒಂದು ವರ್ಷ ಆಯ್ತೇನು... ಆಗ ಎತ್ತಂಬುವು ಬಡಬಡಕ ಎಲುಬುಬಿದ್ದಂಗಿದ್ವು... ಈಗ ಚಂದ ಗುಂಡಗುಂಡ ಆಗ್ಯಾವ. ನಾಳೆ ಬರೋ ಕಾರಹುಣಿವಿಗೆ ಕರಿಬಿಟ್ರ ನಮ್ ಎತ್ತುಗಳ ನೋಡಂಗೆ ಕರಿ ಹರಿಯೋದು' ಅಂತಂದ. ಬಸ್ಸಮ್ಮ ಕೋಳಿ ನಿದ್ದ್ಯಾಗ ಇದ್ದಾಕಿ ಪೂರ ಎಚ್ಚರಾಗಿ 'ನೀನು, ನಿಮ್ಮಪ್ಪ ಕಾರಹುಣಿವಿಗೆ ಕರಿ ಹರಿಬೇಕಂತ ಕುಣಿತೀರಿ. ಆದ್ರ ಕಾರಹುಣಿವ್ಯಾಗ ಎತ್ತು ಕರಿ ಹರೇದು ಬಿಟ್ಟು, ಇಲ್ಲಿಗೆ ಐದಾರು ವರ್ಷ ಆಗಾಕ ಬಂತು. ಈ ಗೌಡ್ರುಗೌಡ್ರು ಜಗಳದ ಸಲುವಾಗಿ ಬಡವರ ಹಬ್ಬ ನಿಂತು ಹೋಗ್ಯೆತಿ. ಈಗೀಗ ಗೌಡ್ರು ಮನ್ಯಾಗ ಎತ್ತುಗಳ ಇಲ್ಲದ ಸಲುವಾಗಿ ಕಾರಹುಣ್ವಿ ಕರಿ ಹರಿಯೋದೆಲ್ಲಿ ಮುಂದಿರುವ ಹಬ್ಬ ಕೂಡ ನೆಟ್ಟಗ ಮಾಡವಲ್ರು. ಅಕಸ್ಮಾತ್ ಹಬ್ಬ ಮಾಡಿದ್ರ ಸಣ್ಣ ಜಾತ್ಯಾವರೆಲ್ಲಾ ಸೇರಿ ಹಬ್ಬಮಾಡಿ ಎತ್ತುಗಳನ ಅಗಸಿ ಕಟ್ಟಿಗೆ ಕರಿ ಹರಿತಾರಂತ ಹಬ್ಬದ ಸುದ್ದಿನೇ ಎತ್ತವಲ್ರು. ಈ ಎಲೆಕ್ಷನ್ ಸಲುವಾಗಿ ಗೌಡ್ರು ಗೌಡ್ರು ಜಗಳ ಮಾಡಿಕೊಂಡು ಈ ಕಾರಹುಣಿವಿ ಒಂದಲ್ಲ... ಊರಾಗ ಪೀರ್ಲಹಬ್ಬ, ಹಂಪಿ ಹುಣಿವಿ ಜಾತ್ರಿ, ಸುಂಕ್ಲಮ್ಮನ ಜಾತ್ರಿ, ಹನುಮಪ್ಪನ ಜಾತ್ರಿ, ದ್ಯಾವಮ್ಮನ ಜಾತ್ರಿ ಎಲ್ಲಾ ಹಬ್ಬಗಳು ಬಂದಾಗಿದ್ದು ಇವ್ರಿಂದಲೇ... ಇನ್ನೆಲ್ಲಿ ಕಾರಹುಣ್ವಿ ಕರಿ ಹರೇದು, ಈಗೇನಿದ್ರ ಯಾರ್‌ಮನ್ಯಾಗ ಅವ್ರು ಹೋಳಿಗಿ, ಅನ್ನ, ಸಾರು ಮಾಡಿಕೆನ್ನದು... ಉಣ್ಣದು. ಹೆಚ್ಚಿಗಂದ್ರ ಎತ್ತುಗಳನ್ನ ಹಳ್ಳದಾಗ ಮೈತೊಳೆದು, ಕೊಂಬಿಗೆ ಬಣ್ಣಹಚ್ಚಿ, ಗ್ವಾಂಡೇವು ಕಟ್ಟಿ, ಮೈತುಂಬ ಗುಲ್ಲಿಟ್ಟು... ಮತ್ತೆ ಯಥಾರೀತಿ ಕುಂಡಿಬಾಯಿ ಮುಚಿಕಂದು ಮನ್ಯಾಗ ಕುಂದ್ರದು' ಅಂತ ಬಸ್ಸಮ್ಮ ಬ್ಯಾಸ್ರದಿಂದ ಈಟುದ್ದ ಕತಿಮಾಡಿ ಹೇಳಿದ್ಲು.

ದುರುಗಯ್ಯ ಅಂಗಾತ ಮಲಿಗಿದಾತ ಬಸ್ಸಮ್ಮ ಕತಿಮಾಡಿ ಹೇಳಿದ್ದು ಕೇಳಿ ಹಾಂ ಇಲ್ದ.. ಹೂಂ ಇಲ್ದ ಮಾರಿಸೊಟ್ಟ ಮಾಡಿಕೆಂತ ಸೌನಂಬರ್ ಬೀಡಿಲೆ ಹೊಗಿ ಬಿಡುತಿದ್ದ. ಹೊಗೆಂಬುದು ಕರಿ ಜಂತಿ ತುಂಬ ಸುಳಿದಾಡಿದಂತೆ ನಾಳೆ ಬರುವ ಹಬ್ಬದ ಕುರಿತು ಹತ್ತಾರು ಯೋಚ್ನೆ ಮಾಡಕತ್ತಿದ. ಹಿಂಗ ಬಸಮ್ಮ ಬ್ಯಾಸ್ರದಿಂದ ಹೇಳೋದು ಕೇಳಿ ಶಾಣ 'ನಮ್ಮೂರಗ್ಯಾಕ ಮತ್ತೆ ಕಾರಹುಣಿವಿ ನಡಿಬಾರ್ದು. ಅವಾಗ ಎಷ್ಟು ಚಂದ ಕಾರಹುಣಿವಿ ಕರಿ ಆಗುತಿತ್ತಲ, ಊರಿಗೆ ಊರೇ ಒಗ್ಗಟ್ಟಾಗಿ ಎಷ್ಟುಚಂದ ಎತ್ತುಗಳ್ನ ಕರಿ ಹರಿತಿದ್ರು. ಮೊದ್ಲು